ಕರ್ನಾಟಕ ವಿಧಾನ ಸಭೆ

ಬುಧವಾರ 29ನೇ ಜುಲೈ 2009ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು 10–55 ಗಂಟೆಗೆ ಪ್ರಾರಂಭವಾಯಿತು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(11-00 AM)

1. ಚುನಾವಣಾ ಪ್ರಸ್ತಾಪ :

ವಿಷಯ : ವಿಧಾನ ಸಭೆಯ ವಿವಿಧ ಸಮಿತಿಗಳನ್ನು ರಚಿಸುವ ಬಗ್ಗೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 14–07–09 ರಂದು ವಿಧಾನಸಭೆಯ ಸಮಿತಿಗಳನ್ನು ರಚಿಸುವ ಪ್ರಸ್ತಾವನೆಯನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಲ್ಲದೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯಗಳ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಹಾಗೂ ಅನಾಥಾಲಯ ಮತ್ತು ಧಾರ್ಮಿಕ ಸ್ಥಳಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಲು ಸಹ ಪ್ರಸ್ತಾಪವನ್ನು ಮಂಡಿಸಲಾಗಿರುತ್ತದೆ. ಆದುದರಿಂದ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇ ಕೆಂದು ಕೋರುತ್ತದೆ.

ಅಧ್ಯಕ್ಷರು : ಪ್ರಸ್ತಾವ ಮಂಡಿಸಲಾಗಿದೆ. ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೇ ನೀವೇನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ ಅದು ಬೇಡ, ಡಿಮಾಂಡ್ ಮೇಲೆ ಚರ್ಚೆ